ಸವಿ ಸವಿ ನೆನಪು..

# ಗೆಳೆತನ ಬೆಸೆದ ಪಾರಿವಾಳ!



ಸಾಮಾಜಿಕ ಸಮಸ್ಯೆಗಳ ನಿರ್ವಹಣೆ ಮಾಡುವಂತೆ ಜಿಲ್ಲಾಧಿಕಾರಿ ಅನುರಾಧಾ ಅವರಿಗೆ ಮನವಿ ಸಲ್ಲಿಸುತ್ತಿರುವ ನಿತ್ಯಾನಂದ ಒಳಕಾಡು ಹಾಗೂ ತಾರಾನಾಥ್

**ಆಸ್ಪತ್ರೆಯ ಶವಾಗಾರದಲ್ಲಿಟ್ಟ ವ್ಯಕ್ತಿಯ ಅಂತ್ಯಸಂಸ್ಕಾರಕ್ಕೆಂದು ಹೋಗುತ್ತಿದ್ದ ನನಗೆ ಅನಿರೀಕ್ಷಿತವಾಗಿ ಒಬ್ಬ ಖ್ಯಾತ ಸಮಾಜ ಸೇವಕರ ಪರಿಚಯವಾಯಿತು. ನಮ್ಮ ಪರಿಚಯ–ಸ್ನೇಹಕ್ಕೆ ಸೇತುವೆಯಾಗಿ ಬಂದದ್ದು ಒಂದು ಮುಗ್ಧ ಪಾರಿವಾಳ.**

**■ ತಾರಾನಾಥ್ ಮೇಸ್ತ ಶಿರೂರು**

ವ್ಯಕ್ತಿ–ವ್ಯಕ್ತಿಗಳ ನಡುವೆ ಗೆಳೆತನ ಮೂಡಲು ಹಲವಾರು ಸಂದರ್ಭಗಳು ಒದಗಿ ಬರುತ್ತವೆ. ಪರಿಚಯವಾಗಲು, ಸ್ನೇಹಿತರಾಗಲು ಕೆಲವೊಮ್ಮೆ ಮನುಷ್ಯರಷ್ಟೇ ಅಲ್ಲದೆ ಪ್ರಾಣಿ–ಪಕ್ಷಿಗಳೂ ಸಹಕರಿಸುತ್ತವೆ. ಇಲ್ಲಿ ನನಗೆ ಒಬ್ಬ ಉತ್ತಮ ಸ್ನೇಹಿತ ಸಿಕ್ಕಿದ್ದು ಒಂದು ಪಾರಿವಾಳದ ಸಹಾಯದಿಂದ ಎಂದರೆ ನಂಬುತ್ತೀರಾ?

ಒಮ್ಮೆ ನನ್ನ ಆಪ್ತ ಮಿತ್ರ ಕರ್ನಾಟಕ ಸರ್ಕಾರದಿಂದ ‘ಜೀವರಕ್ಷಕ ಪ್ರಶಸ್ತಿ’ ಪಡೆದ ಸಮಾಜ ಸೇವಕ ವಿಶು ಶೆಟ್ಟಿ ಉಡುಪಿ ಅವರು, ‘ಮೇಸ್ತರೇ ನೀವು ತುರ್ತಾಗಿ ಉಡುಪಿ ಜಿಲ್ಲಾಸ್ಪತ್ರೆಗೆ ಬನ್ನಿ. ರಸ್ತೆಯಲ್ಲಿ ಬಿದ್ದುಕೊಂಡಿದ್ದ ಅಪರಿಚಿತ ವ್ಯಕ್ತಿಯನ್ನು ಈ ಹಿಂದೆ ಉಡುಪಿ ಜಿಲ್ಲಾಸ್ಪತ್ರೆಗೆ ದಾಖಲು ಮಾಡಿದ್ದೀರಿ. ಆತ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟು ಇಪ್ಪತ್ತು ದಿನಗಳಾಯಿತು. ಶವ ಆಸ್ಪತ್ರೆಯ ಶವಾಗಾರದಲ್ಲಿ ಇಡಲಾಗಿದೆ. ವಾರಸುದಾರರ ಬರುವಿಕೆಗೆ ಮಾಧ್ಯಮದಲ್ಲಿ ಪ್ರಕಟಣೆ ನೀಡಿಯೂ ಇದುವರೆಗೆ ಕಾಲಮಿತಿ ಕಳೆದರೂ ಯಾರೂ ಬರಲಿಲ್ಲ. ಶವ ಮಹಜರು, ಕಾನೂನು ಪ್ರಕ್ರಿಯೆಗಳು ನಡೆದ ನಂತರ, ಪೊಲೀಸರ ಸಮಕ್ಷಮದಲ್ಲಿ ವಾರಸುದಾರರು ಇಲ್ಲದ ಶವಸಂಸ್ಕಾರ ನಡೆಸೋಣ’ ಎಂದರು.

ಮಿತ್ರ ವಿಶು ಶೆಟ್ಟಿ ಅವರು ಈ ಮೊದಲು 50 ಕ್ಕೂ ಹೆಚ್ಚು ಅನಾಥರ, ವಾರಸುದಾರರು ಇಲ್ಲದ ಶವಗಳ ಸಂಸ್ಕಾರವನ್ನು ತಮ್ಮ ಸ್ವಂತ ಖರ್ಚಿನಲ್ಲಿ ತಾವೇ ಮುಂದೆ ನಿಂತು ಗೌರವಪೂರ್ವಕವಾಗಿ ಮಾಡಿದವರು. ಅವರೊಂದಿಗೆ ನಾನು 25 ಕ್ಕೂ ಅಧಿಕ ಶವ ಸಂಸ್ಕಾರ ನಡೆಸುವ ಕಾರ್ಯಗಳಲ್ಲಿ ಭಾಗಿಯಾಗಿ ಸಹಕಾರ ನೀಡಿದ್ದೇನೆ. ಅವರ ಕರೆಗೆ ಸ್ಪಂದಿಸಿ ಉಡುಪಿ ಜಿಲ್ಲಾಸ್ಪತ್ರೆಗೆ ಬಂದಾಗ, ಆಸ್ಪತ್ರೆಯ ಪ್ರವೇಶ ದ್ವಾರದಲ್ಲಿ ಪಾರಿವಾಳ ಪಕ್ಷಿ ಒಂದು ಕಣ್ಣಿನ ಭಾಗಕ್ಕೆ ಗಾಯಗೊಂಡು, ಕಣ್ಣು ಕಾಣದ ಸ್ಥಿತಿಯು ಅದರದಾಗಿತ್ತು. ವಾಹನಗಳ ಚಕ್ರದಡಿಯಲ್ಲಿ ಸಿಲುಕಿ ಸಾವು ಕಾಣುವ, ಬೆಕ್ಕು ನಾಯಿಗಳಿಗೆ ಆಹಾರವಾಗುವ ಪರಿಸ್ಥಿತಿಯಲ್ಲಿತ್ತು. ನಾನು ಪಾರಿವಾಳವನ್ನು ಹಿಡಿದು ಸುರಕ್ಷಿತ ಜಾಗದಲ್ಲಿಟ್ಟು ಮುಂದೆ ಏನು ಮಾಡೋದು ಎನ್ನುವ ಆಲೋಚನೆಯಲ್ಲಿದ್ದೆ.

ಆವಾಗಲೇ ಆಂಬುಲೆನ್ಸ್ ಮುಖಾಂತರ ಬಸ್ಸು ತಂಗುದಾಣದಲ್ಲಿ ಅನಾರೋಗ್ಯದಿಂದ ಬಿದ್ದು ಕೊಂಡಿದ್ದ ವ್ಯಕ್ತಿಯನ್ನು ದಾಖಲಿಸಲು ಸಮಾಜ ಸೇವಕ ನಿತ್ಯಾನಂದ ಒಳಕಾಡು ಅವರು ಬಂದರು. ನನ್ನ ನೋಡಿ... ‘ಇಲ್ಲಿ ಏನು ಬಂದದ್ದು’ ಎಂದು ಕೇಳಿದರು. ‘ಹೀಗೆ ಆಸ್ಪತ್ರೆಗೆ ಬಂದಿದ್ದು’ ಎಂದೆ. ಅವರ ಫಲಾಪೇಕ್ಷೆ ಇಲ್ಲದ ಸಾಮಾಜಿಕ ಚಟುವಟಿಕೆಗಳನ್ನು ದೂರದಿಂದಲೇ ಬಲ್ಲವನಾಗಿದ್ದೆ. ಆದರೆ ಅವರ ನೇರ ಪರಿಚಯ ಇಲ್ಲವಾಗಿತ್ತು. ಆದರೆ ಅವರು ನನ್ನ ಸಾಹಿತ್ಯ ಬರಹಗಳನ್ನು ಓದಿದವರಾಗಿದ್ದರು. ಪಾರಿವಾಳದ ವಿಚಾರವನ್ನು ಅವರಲ್ಲಿ ಪ್ರಸ್ತಾಪ ಮಾಡಿದೆ. ಅವರು ಪಾರಿವಾಳದ ಪರಿಸ್ಥಿತಿ ಕಂಡು ಮರುಕ ಪಟ್ಟು, ತಮ್ಮ ಆಂಬುಲೆನ್ಸ್ ವಾಹನದಲ್ಲಿ ತಮ್ಮ ಕಚೇರಿಗೆ ಕೊಂಡು ಹೋಗಿ ಪಂಜರದಲ್ಲಿಟ್ಟು ನೀರು ಆಹಾರ ನೀಡಿ, ಸಾಲಿಗ್ರಾಮದ ಅನಾಥ ಪ್ರಾಣಿಗಳ ಆಶ್ರಮಕ್ಕೆ ದಾಖಲಿಸುವ ವ್ಯವಸ್ಥೆ ಮಾಡಿದರು.

ಚಿಂತಾಜನಕ ಸ್ಥಿತಿಯಲ್ಲಿದ್ದ ಪಾರಿವಾಳಕ್ಕೆ ಅವರು ಮಾಡಿದ ಸೇವೆಯನ್ನು ಕಂಡು, ಅವರಿಗಿರುವ ಮೂಕ ಪ್ರಾಣಿ ಪಕ್ಷಿಗಳ ಮೇಲಿರುವ ಪ್ರೀತಿ ಎಷ್ಟೆಂದು ಅರ್ಥ ಮಾಡಿಕೊಂಡೆ. ಪಾರಿವಾಳದ ನೆಪದಿಂದಾಗಿ ಆ ದಿನದಿಂದ ನಮ್ಮಿಬ್ಬರ ಸ್ನೇಹ ಹುಟ್ಟಿಕೊಂಡಿತು. ಅಲ್ಲಿಂದ ಇಲ್ಲಿಯವರೆಗೆ ನಿತ್ಯಾನಂದ ಒಳಕಾಡು ಅವರೊಂದಿಗೆ ಸೇರಿಕೊಂಡು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿ ಕೊಂಡಿದ್ದೇನೆ. ಅವರ ಸ್ನೇಹದಿಂದ ಸಮಾಜದ ದುಃಖ ದುಮ್ಮಾನಗಳಿಗೆ ಸ್ಪಂದಿಸುವ ಮನೋಭಾವ ನನ್ನಲ್ಲಿ ಬೆಳೆಯಿತು. ಕೆಲವರು ಸಮಾಜ ಸೇವಕ ನಿತ್ಯಾನಂದರ ಗೆಳೆತನ ಆಗಿದ್ದು ಹೇಗೆಂದು ಕೇಳುವುದುಂಟು. ಆವಾಗ ನಾನು ನಮ್ಮಿಬ್ಬರ ನಡುವೆ ಗೆಳೆತನ ಬೆಸೆದ ಪಾರಿವಾಳದ ಕಥೆ ಹೆಮ್ಮೆಯಿಂದ ಹೇಳುತ್ತೇನೆ. ಇದು ನನ್ನ ಬದುಕಿನ ಅವಿಸ್ಮರಣೀಯ ಸವಿ ನೆನಪಾಗಿ ಮನದಲ್ಲಿ ಅಚ್ಚಾಗಿ ಉಳಿದಿದೆ. ■